ಶ್ರೀ ಸುಭಾಷ್ ಆರ್ ಗುತ್ತೇದಾರ್: ಮಂತ್ರಿಗಳೇ ಡಿಫೆಂಡ್ ಮಾಡಿಕೊಂಡರೆ ಹೇಗೆ?

ಅಧ್ಯಕ್ಷರು: ಕಾನೂನಿನಲ್ಲಿ ಇರುವುದನ್ನು ಹೇಳಿದ್ದಾರೆ. ಕ್ವಾಸಿ ಜ್ಯುಡಿಷಿಯಲ್ ಅದಕ್ಕೆ Essestial Commodities Act ಇದೆ. ಅದರ ಪ್ರಕಾರ ಮಾಡಿದ್ದಾರೆ.

ಶ್ರೀ ಸುಭಾಷ್ ಆರ್ ಗುತ್ತೇದಾರ್: ಕೇಸ್ ಆಗಿರುವುದು ನಿಜ ಅಲ್ಲವಾ, ಇವರು ಏಕೆ ಕ್ರಮ ತೆಗೆದುಕೊಂಡಿಲ್ಲ?

ಹಳದಿ ಕಾರ್ಡ್ ವಿತರಣೆಯ ಬಗ್ಗೆ

52(378) ಶ್ರೀ ಕೆ ಜೆ ಜಾಜ್:(ಸರ್ವಜ್ಞನಗರ) ವಿಧಾನಸಭಾ ಸದಸ್ಯರು ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡುಬಡವರಿಗೆ ಹಳದಿ ಕಾರ್ಡ್ ವಿತರಣೆ ಮಾಡುವುದು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಅರ್ಜಿಗಳು ಬಾಕಿ ಉಳಿದಿದೆ ಮತ್ತು ತಡೆಹಿಡಿಯಲು ಕಾರಣವೇನು; ವಿವರ ನೀಡುವುದು;

ಆ) ಬಿ.ಬಿ.ಎಂ.ಪಿ. ವ್ಯಾಪ್ತಿಯ ಎಷ್ಟು ಪಡಿತರ ಅಂಗಡಿಗಳಿವೆ; ಬಿ.ಬಿ.ಎಂ.ಪಿ. ವ್ಯಾಪ್ತಿ ವಿಸ್ತೀರ್ಣ ವಾಗಿರುವುದರಿಂದ ಪಡಿತರ ಮಳಿಗೆಗಳು ಹೆಚ್ಚಿಗೆ ಪ್ರಾರಂಭಿಸಲು ಸರ್ಕಾರ ಯೋಜನೆಯನ್ನು ರೂಪಿಸಿದಯೇ?

ಶ್ರೀ ಆರ್ ಅಶೋಕ್(ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ತಡೆಹಿಡಿದಿರುವುದಿಲ್ಲ ಅದರೆ 13902 ಪಡಿತರ ಚೀಟಿದಾರರು ತಮ್ಮ ಬಿಪಿಎಲ್ ಪಡಿತರ ಚೀಟಿಗಳನ್ನು ಪಡಿದುಕೊಂಡಿರುವುದಿಲ್ಲ. ಬಿಬಿಎಂಪಿ ವ್ಯಾಪ್ರಿಯಲ್ಲಿ ಒಟ್ಟು 11102 ಅರ್ಜಿಗಳು ಬಾಕಿ ಉಳಿದಿವೆ. ಅರ್ಜಿಯನ್ನು ಸಲ್ಲಿಸಿದಾಗ ನೀಡಿದ್ದಂತಹ ವಿಳಾಸದಲ್ಲಿ ವಾಸವಿಲ್ಲದೇ ಇರುವುದು, ಅಥವಾ ನೀಡಿರುವಂತಹ ವಿಳಾಸ ಸ್ಪಷ್ಟವಿಲ್ಲದಿರುವುದು ಅಥವಾ ತಾತ್ಕಾಲಿಕ ಪಡಿತರ ಚೀಟಿ ಸಿದ್ದಪಡಿಸಿ ಒಂದು ವರ್ಷ ಕಳೆದರೂ ಪಡೆದುಕೊಳ್ಳಲು ಬಾರದೇ ಇರುವುದು ಹಾಗೂ ಹಂಚಿಕೆಯಾಗಿರುವ ಎಪಿಎಲ್ ಪಡಿತರ ಚೀಟಿಯನ್ನು

ತಿರಸ್ಕರಿಸಿರುವುದೂ ಸಹ ಪಡಿತರ ಚೀಟಿಗಳು ವಿತರಣೆಯಾಗದೆ ಉಳಿಕೆಯಾಗಲು ಕಾರಣಗಳಾಗಿವೆ.

ಆ) ಬಿಬಿಎಂಪಿ. ವ್ಯಾಪ್ತಿಯಲ್ಲಿ 1540 ನ್ಯಾಯಬೆಲೆ ಅಂಗಡಿಗಳಿವೆ. ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992 ರ ಉಪಬಂಧಗಳನ್ವಯ ಹಾಗೂ ಪಡಿತರ ಚೀಟಿಗಳ ಲಭ್ಯತೆ ಹಾಗೂ ಅವಶ್ಯಕತೆ ಹಾಗೂ ಪಡಿತರ ಚೀಟಿದಾರರ ಬೇಡಿಕೆಯನ್ನು ಆದರಿಸಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ ಜೆ ಜಾರ್ಜ್: ಮಾನ್ಯ ಅಧ್ಯಕ್ಷರೆ, ಈ ಉತ್ತರ ಸತ್ಯಕ್ಕೆ ದೂರವಾಗಿದೆ. ನಾನು ಒಬ್ಬನೇ ಅಲ್ಲ ನಿಮ್ಮ ಪಕ್ಷದ ಶಾಸಕರೂ ಇದ್ದಾರೆ, ನಮ್ಮ ಪಕ್ಷದ ಶಾಸಕರೂ ಇದ್ದಾರೆ, ಯಾರನ್ನಾದರೂ ಕೇಳಿ ನೋಡಿ, ಬೆಳಿಗ್ಗೆ ಸಾಯಂಕಾಲ ಹೋದರೆ ಕಡು ಬಡ ಜನ ನಮ್ಮ ಬಳಿ BPL ಕಾರ್ಡಿಗಾಗಿ ಬರುತ್ತಿದ್ದಾರೆ. ಇವತ್ತು ಸರ್ಕಾರದ ಧೋರಣೆ ಏನಿದೆ, ನಿಮ್ಮ BPL manifesto ದಲ್ಲಿ 2ರೂ.ಗೆ ಒಂದು ಕೆಜಿ ಅಕ್ಕಿ ಕೊಡುತ್ತೇನೆಂದು ಹೇಳಿದ್ದೀರಿ. ಸರ್ಕಾರ ಬಂದು ಸುಮಾರು ಎರಡು ವರ್ಷಗಳು ಕಳೆದರೂ ಇದುವರೆಗೂ ನಿಜವಾದ ಕಡು ಬಡವರಿಗೆ ಕಾರ್ಡ್‌ಗಳನ್ನು ಕೊಡುತ್ತಿಲ್ಲ. ಇವತ್ತು ಸರ್ಕಾರದ ಬೊಕ್ಕಸದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡುತ್ತಿದ್ದೇವೆ. ಆಗಲೇ ಮಾನ್ಯ ಸಚಿವರು ಕಾಳಸಂತೆಯಲ್ಲಿ ಸಾಕಷ್ಟು ಹೋಗುತ್ತಿದೆ ಎಂದು ಉತ್ತರ ಕೊಟ್ಟರು. ಇದರ ಅರ್ಥವೇನು? ಇವತ್ತು ನಿಜವಾದ ಬಡವರಿಗೆ ಆಹಾರಧಾನ್ಯಗಳು ಸಿಗುತ್ತಿಲ್ಲ. ಕಾಳಸಂತೆಯಲ್ಲಿ ಹೋಗುತ್ತಿದೆ. ಅಧಿಕಾರಿಗಳು ಹೊಸ BPL ಕಾರ್ಡುಗಳನ್ನು ಕೊಡುವುದನ್ನು ಈಗಾಗಲೇ ನಿಲ್ಲಿಸಿದ್ದಾರೆ. ಒಂದು ಕಾರ್ಡನ್ನೂ ಕೂಡ ಇಶ್ಯೂ ಮಾಡುತ್ತಿಲ್ಲ. ಈ ರೀತಿ ದೊಡ್ಡ ಅನ್ಯಾಯವಾಗುತ್ತಿದೆ. ಪ್ರತಿಯೊಂದು ಅಧಿವೇಶನದಲ್ಲಿ ಸಹ ಇದರ ಬಗ್ಗೆ ಚರ್ಚೆಯಾಗಿದೆ. ಕಳೆದ ಅಧಿವೇಶದಲ್ಲಿ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದರೂ ಸಮಯದ ಅಭಾವದಿಂದ ಅದು ಚರ್ಚೆಗೆ ಬರಲಿಕ್ಕೆ ಸಾಧ್ಯವಾಗಲಿಲ್ಲ. ಇದು ತುಂಬಾ ಮುಖ್ಯವಾಗಿದೆ. ಮಾನ್ಯ ಗೋವಿಂದ ಕಾರಜೋಳರವರು ಇದ್ದಾರೆ,

ಮಾನ್ಯ ಅಶೋಕ್‌ರವರು ಇದ್ದಿದ್ದರೆ ಚೆನ್ನಾಗಿತ್ತು. ಕಳೆದ ಅಧಿವೇಶನದಲ್ಲಿ ಮಾನ್ಯ ಹಾಲಪ್ಪರವರು ಉತ್ತರ ಕೊಟ್ಟಿದ್ದರು. ಮಾನ್ಯ ಆರೋಗ್ಯ ಸಚಿವರು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ದಯವಿಟ್ಟು ಈ ಸಮಸ್ಯೆಗೆ ತಾವು ಪರಿಹಾರವನ್ನು ಕಂಡುಹಿಡಿಯಬೇಕು. ಯಾವ ಅಧಿಕಾರಿಗಳು BPL Card ಕೊಡುವುದನ್ನು ನಿಲ್ಲಿಸಿದ್ದಾರೆ ಅವರಿಗೆ ಈ ಕಾರ್ಡ್‌ಗಳನ್ನು ಕೊಡುವಂತೆ ಆದೇಶ ಮಾಡಬೇಕು. ಎಲ್ಲಿ In-eligible ಯಾರಾದರೂ ಕಾರ್ಡ್ ತೆಗೆದುಕೊಂಡಿದ್ದರೆ ಅಂತಹವರ ಕಾರ್ಡ್‌ಗಳನ್ನು ಬೇಕಾದರೆ ತಾವು ರದ್ದು ಮಾಡಿ. ಅದು ಬೇಡವೆಂದು ನಾವು ಹೇಳುವುದಿಲ್ಲ. ಆದರೆ ಅರ್ಹರಿಗೆ ಕಾರ್ಡ್‌ಗಳನ್ನು ಕೊಡುವಂತಹ ಕೆಲಸವನ್ನು ತಾವು ಬೇಗ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಅವರು BBMP ಗೆ ಸೀಮಿತವಾಗಿ ಕೇಳಿದ್ದಾರೆ.

ಅಧ್ಯಕ್ಷರು:– ಎಲ್ಲರೂ ಎದ್ದು ನಿಂತರೆ ಹೇಗೆ? ಪೂರಕ ಬೇಡಿಕೆ ಮೇಲೆ ಡಿಮಾಂಡ್‌ನಲ್ಲಿ ಚರ್ಚೆ ಮಾಡುವಾಗ ಹೇಳಿ. ಬೇಡಿಕೆ ಮೇಲೆ ಚರ್ಚೆ ಇದೆ ಆಗ ಎಲ್ಲರೂ ಮಾತನಾಡಿ. ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

12.10 ಪಿ.ಎಂ

. **ಅಧ್ಯಕ್ಷರು:** ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಎಲ್ಲರೂ ಮಾತನಾಡಿ. ಈಗ ಬೇಡ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಜಾರ್ಜ್‌ರವರು ಬಿ.ಬಿ.ಎಂ.ಪಿ.ಗೆ ಸಂಬಂಧಪಟ್ಟಂತೆ ಕೇಳಿದ್ದಾರೆ.

(ಗೊಂದಲ)

ಶ್ರೀ ವಿ ಮುನಿಯಪ್ಪ: ಬಿ.ಬಿ.ಎಂ.ಪಿ.ಯದು ಮತ್ತು ಹಳ್ಳಿಯದು ಎಲ್ಲವೂ ಒಂದೇ ಸಮಸ್ಯೆಯಾಗಿದೆ.

(ಗೊಂದಲ)

ಅಧ್ಯಕ್ಷರು: ಪೂರಕ ಬೇಡಿಕೆಗಳ ಮೇಲೆ ಚರ್ಚೆ ಮಾಡಿ. ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಇದರ ಬಗ್ಗೆ ಹೇಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಎಲ್ಲರೂ ಎದ್ದುನಿಂತು ಮಾತನಾಡಿದರೆ ಹೇಗೆ ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ:– ಮಾನ್ಯ ಅಧ್ಯಕ್ಷರೆ, ಇದು ಎಲ್ಲರೂ ಕೇಳುವಂಥ ಪ್ರಶ್ನೆಯಲ್ಲ. ಮಾನ್ಯ ಜಾರ್ಜ್‌ರವರು ಬಿ.ಬಿ.ಎಂ.ಪಿ.ಗೆ ಸೀಮಿತವಾಗಿರುವಂಥ ಪ್ರಶ್ನೆಯನ್ನು ಕೇಳಿದ್ದಾರೆ. ಅಷ್ಟಕ್ಕೆ ಮಾತ್ರ ಈಗ ನನ್ನ ಹತ್ತಿರ ಉತ್ತರವಿದೆ. ಉಳಿದದ್ದಕ್ಕೆ ಎಲ್ಲರೂ ಪ್ರಶ್ನೆಯನ್ನು ಕೇಳುವುದಿದ್ದರೆ ನೀವು ಬೇಕಾದರೆ ಒಂದು ದಿವಸ ಇದರ ಮೇಲೆಯೇ ಚರ್ಚೆಯನ್ನು ಮಾಡಲು ಅವಕಾಶ ಕೊಟ್ಟರೆ ಚರ್ಚೆ ಮಾಡಲಿ. ಅದಕ್ಕೆ ಉತ್ತರವನ್ನು ಕೊಡುತ್ತೇನೆ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ.

(ಗೊಂದಲ)

ಅಧ್ಯಕ್ಷರು:– ಎಲ್ಲರೂ ಹೀಗೆ ಒಟ್ಟಿಗೆ ಎದ್ದು ನಿಂತರೆ ನಾನು ಮುಂದಿನ ಪ್ರಶ್ನೆಯನ್ನು ಕರೆಯಬೇಕಾಗುತ್ತದೆ. ಬೇಡಿಕೆ ಮೇಲೆ ಚರ್ಚೆ ಮಾಡುವಾಗ ನೀವು ಎನು ಇದರ ಬಗ್ಗೆ ಹೇಳಬೇಕೆಂದಿದ್ದೀರೋ ಅವೆಲ್ಲವನ್ನೂ ಹೇಳಿ. ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಿ ಮುನಿಯಪ್ಪ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಕಾಶ ಕೊಡುತ್ತೇನೆಂದು ಕಳೆದ ಅಧಿವೇಶನದಲ್ಲಿ ತಾವು ಹೇಳಿದ್ದೀರಿ. ಆದುದರಿಂದ ಈಗ ನಮಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಕೊಡಿ.

ಅಧ್ಯಕ್ಷರು: ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಅವಕಾಶಕ್ಕಾಗಿ ನೀವು ನನಗೆ ಬೇರೆ ರೂಪದಲ್ಲಿ ನೋಟಿಸ್‌ನ್ನು ಕಳುಹಿಸಿಕೋಡಿ. ಅದರೆ ಈಗ ಇರುವ ಪ್ರಶ್ನೆಯನ್ನೇ ಅರ್ಧ ಗಂಟೆ ಕಾಲಾವಧಿಗೆ ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ನೀವು ಬೇಕಾದರೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ನೀವು ಬರವಣಿಗೆಯಲ್ಲಿ ಕೋಡಿ. ಅವಕಾಶ ಕೊಡೋಣ. ಅದನ್ನು ಬಿಟ್ಟು ಮಾನ್ಯ ಸದಸ್ಯರಾದ ಜಾರ್ಜ್‌ರವರು ಕೇವಲ ಬಿ.ಬಿ.ಎಂ.ಪಿ.ಗೆ ಸೀಮಿತವಾಗಿ ಪ್ರಶ್ನೆ ಕೇಳಿದ್ದರೆ ಅದರ ಜೊತೆಯಲ್ಲಿಯೇ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಚರ್ಚೆಗೆ

ಅವಕಾಶ ಕೊಡಿ ಎಂದು ನೀವು ಕೇಳಿದರೆ ಹೇಗೆ ಹೇಳಿ. ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಎಂ ಕಾರ್‌ಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಾರ್ಜ್‌ರವರು ಬಿ.ಬಿ.ಎಂ.ಪಿ.ಗೆ ಸೀಮಿತವಾಗಿ ಪ್ರಶ್ನೆ ಕೇಳಿದ್ದಾರೆ. ನಾವು ಈಗಾಗಲೇ 13902 ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. 11102 ಅರ್ಜಿಗಳು ನಮ್ಮ ಹತ್ತಿರ ಎನ್ನೂ ಬಾಕಿ ಇವೆ. ಮಾನ್ಯ ಜಾರ್ಜ್‌ರವರು ಬಡವರಿಗೆ ಕಾರ್ಡ್ ಸಿಕ್ಕಿಲ್ಲವೆನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬಹಳ ಮಹತ್ವದ ವಿಷಯ ಬೆಂಗಳೂರಿಗೆ ಸಂಬಂಧಿಸಿದ್ದೇನೆಂದರೆ, ದಿನನಿತ್ಯ ಸಾವಿರಾರು ಕುಟುಂಬಗಳು ಬೇರೆ ರಾಜ್ಯದಿಂದ ಮತ್ತು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಇಲ್ಲಿಗೆ ಬರುತ್ತಿದ್ದಾರೆ. ಅವರು ಅಲ್ಲಿ ಕಾರ್ಡ್‌ನ್ನು ತೆಗೆದುಕೊಂಡಿರುತ್ತಾರೋ ಅಥವಾ ಇಲ್ಲವೋ ಎಂಬುದು ನಮಗೆ ಗೊತ್ತಿರುವುದಿಲ್ಲ. ಅವರು ಒಂದು ವೇಳೆ ಅಲ್ಲಿ ತೆಗೆದುಕೊಂಡಿದ್ದರೆ ಆ ಕಾರ್ಡ್‌ನ್ನು ಅಲ್ಲಿಯೇ ಸರೆಂಡರ್ ಮಾಡಿ ಇಲ್ಲಿ ಡಿಲಿಶನ್ ಸರ್ಟಿಫಿಕೇಟ್ ಕೊಟ್ಟು ಇಲ್ಲಿ ಕಾರ್ಡ್‌ನ್ನು ಕೇಳಬೇಕು. ಇನ್ನು ಹೊರ ರಾಜ್ಯದಿಂದ ಬರತಕ್ಕಂಥ ಸಾವಿರಾರು ಕುಟುಂಗಳಿಗೆ ನಾವು ಬಿ.ಪಿ.ಎಲ್. ಕಾರ್ಡ್ ಕೊಡುವುದಕ್ಕೆ ಬರುವುದಿಲ್ಲ. ಇದು ಸಾಧ್ಯವಿಲ್ಲದ ಮಾತು. ಬೆಂಗಳೂರಿನಲ್ಲಿ ಇದು ಬಹಳ ಗಂಬೀರವಾದಂಥ ಸಮಸ್ಯೆ. ಅದಕ್ಕಾಗಿ ಮಾನ್ಯ ಜಾರ್ಜ್‌ರವರು ಏನು ಪ್ರಶ್ನೆಯನ್ನು ತಂದಿದ್ದಾರೆ, ಅದರಲ್ಲಿ ಕಡು ಬಡವರು ಮತ್ತು ಇಲ್ಲಿಯೇ ಇರತಕ್ಕಂಥವರು, ಇದೇ ಬೆಂಗಳೂರಿನವರೇ ಆಗಿರುವವರಲ್ಲಿ ಯಾರದ್ದಾದರೂ ಬಿಟ್ಟುಹೋಗಿದ್ದರೆ ಖಂಡಿತವಾಗಿ ಅವರಿಗೆ ಕಾರ್ಡ್ ಕೊಡಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಬಿ ರಮಾನಾಥ ರೈ :– ಮಾನ್ಯ ಅಧ್ಯಕ್ಷರೆ, ಶ್ರೀಮಂತರಿಗೆ ಎ.ಪಿ.ಎಲ್. ಕಾರ್ಡ್...

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ಜಾರ್ಜ್‌ರವರು ಕೇಳಿರುವುದು ಕೇವಲ ಬೆಂಗಳೂರಿಗೆ ಸೀಮಿತವಾಗಿರುವ ಪ್ರಶ್ನೆ. ಆದಕಾರಣ ಬೇರೆಯವರು ಈ ಪ್ರಶ್ನೆಗೆ ಸೀಮಿತವಲ್ಲದ್ದು ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ.

ವರದಿಗಾರರೆ, ಅವರು ಏನೇ ಹೇಳಿದರೂ ಅದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

ಶ್ರೀ ವಿ ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಧಿಯ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ನೀವು ಇದರ ಬಗ್ಗೆ ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ಅದನ್ನು ಬಿಟ್ಟು ಈಗಲೇ ಇಡೀ ರಾಜ್ಯದ್ದು ಕೇಳಿದರೆ ಎಲ್ಲಿಂದ ಅವರು ತಾನೇ ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು: ನೀವು ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ನಾನು ಮುಂದಿನ ಪ್ರಶ್ನೆಯನ್ನು ಕರೆಯಬೇಕಾಗುತ್ತದಷ್ಟೆ.

ಶ್ರೀ ಬಿ ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಬಿ.ಪಿ.ಎಲ್. ಕಾರ್ಡ್ ಸಿಗಬೇಕಾದವರಿಗೆ ಎ.ಪಿ.ಎಲ್. ಕಾರ್ಡ್ ಸಿಕ್ಕಿದೆ. ಎ.ಪಿ.ಎಲ್. ಕಾರ್ಡ್ ಸಿಗಬೇಕಾದವರಿಗೆ ಬಿ.ಪಿ.ಎಲ್. ಕಾರ್ಡ್ ಸಿಕ್ಕಿದೆ. ಎಲ್ಲ ಕಡೆ ಹೀಗೆ ಆಗಿರುವುದುಂಟು.

ಅಧ್ಯಕ್ಷರು: ನೋಡಿ. ಅವರು ಬೆಂಗಳೂರಿಗೆ ಸೀಮಿತವಾಗಿರುವಂತೆ ಪ್ರಶ್ನೆ ಕೇಳಿದ್ದಾರೆ. ಅಷ್ಟಕ್ಕೆ ಮಾತ್ರ ಸಚಿವರು ಉತ್ತರ ಕೊಟ್ಟಿದ್ದಾರೆ. ನೀವು ಇಡೀ ರಾಜ್ಯದ್ದು ಕೇಳಿದರೆ ಮಾನ್ಯ ಸಚಿವರ ಹತ್ತಿರ ಈಗ ಮಾಹಿತಿ ಇಲ್ಲ. ನೀವು ಬೇಕಾದರೆ ಬೇರೆ ರೂಪದಲ್ಲಿ ಚರ್ಚೆಗೆ ಈ ವಿಷಯವನ್ನು ತನ್ನಿ. ಅದನ್ನು ಬಿಟ್ಟು ಎಲ್ಲದಕ್ಕೂ ಹೀಗೆ ಎದ್ದುನಿಂತರೆ ಸದನವನ್ನು ನಡೆಸುವುದಾದರೂ ಹೇಗೆ ಹೇಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗೋವಿಂದ ಎಂ ಕಾರ್‌ಜೋಳ: ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಈ ವಿಷಯದ ಬಗ್ಗೆ ವಿಧಾನಸಭೆಯಲ್ಲಿ ಬಂದು ಗಲಾಟೆ ಮಾಡುವ ಬದಲಾಗಿ, ಪ್ರತಿ ತಿಂಗಳು ಅವರು ಮೀಟಿಂಗ್ ತೆಗೆದುಕೊಳ್ಳುತ್ತಿರುತ್ತಾರೆ ಮತ್ತು ಮೂರು ತಿಂಗಳಿಗೊಮ್ಮೆ ಕೆ.ಡಿ.ಪಿ.ಸಭೆಯನ್ನು ಕೂಡ ಮಾಡಿರುತ್ತಾರೆ. ಅಲ್ಲಿ ಈ ವಿಷಯದಲ್ಲಿ ಲೋಪದೋಷಗಳಾಗಿದ್ದರೆ ಅಧಿಕಾರಿಗಳ ಕಿವಿ ಹಿಂಡಿ

ಲೋಪದೋಷ ಸರಿಮಾಡಿಸಿ ಕಾರ್ಡ್‌ನ್ನು ಅಲ್ಲಿಯೇ ಕೊಡಿಸಬಹುದಲ್ಲ? ಆ ರೀತಿ ಅವರು ಅಲ್ಲಿ ಕೊಡಿಸುವಂಥ ಕೆಲಸವನ್ನು ಮಾಡಲಿ.

(ಗೊಂದಲ)

ಅಧ್ಯಕ್ಷರು: ಬಿ.ಬಿ.ಎಂ.ಪಿ.ಗೆ ಸೀಮಿತವಾಗಿರುವ ಪ್ರಶ್ನೆ ಸಂದರ್ಭದಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಮಾಹಿತಿ ಕೇಳಿದರೆ ಹೇಗೆ. ಆದಕಾರಣ ಈಗ ಪ್ರಶ್ನೆಯನ್ನು ಮುಕ್ತಾಯ ಗೊಳಿಸಲಾಗಿದೆ. ಮುಂದಿನ ಪ್ರಶ್ನೆ ಮಾನ್ಯ ರೇವಣ್ಣನವರದ್ದು ಇದೆ. ಅವರು ಪ್ರಶ್ನೆಯನ್ನು ಈಗ ಕೇಳಬೇಕು.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನೀವು ಅವರುಗಳಿಗೆ ಒಂದು ಆಶ್ವಾಸನೆಯನ್ನು ಕೊಟ್ಟುಬಿಡಿ. ಅರ್ಧ ಗಂಟೆ ಚರ್ಚೆಗೆ ಅವರು ನೋಟಿಸ್ ಕೊಡುತ್ತಾರೆ. ದಯಮಾಡಿ ಅವರಿಗೆ ನೀವು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಕೊಡುತ್ತೇನೆ ಎಂದು ಹೇಳಿದ್ದೇನೆ. ಅವರು ಬೇರೆ ರೂಪದಲ್ಲಿ ಚರ್ಚೆಗೆ ಇದನ್ನು ತರಲಿ. ನಾನು ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರು ನೋಡಿಸ್ ಕೊಡುತ್ತಾರೆ. ಆದರೆ ಈಗ ನಿಮಗೆ ಇರತಕ್ಕಂಥ ಅಧಿಕಾರವನ್ನು ಬಳಸಿ ಈಗಲೇ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶವನ್ನು ಅವರಿಗೆ ಕೊಡಿ.

ಅಧ್ಯಕ್ಷರು: ಅವರು ಬೇರೆ ರೂಪದಲ್ಲಿ ಇದನ್ನು ತರಲಿ. ನಾನು ಅವರಿಗೆ ಅವಕಾಶವನ್ನು ಕೊಡುತ್ತೇನೆ. ಆದರೆ ಈಗ ಈ ಪ್ರಶ್ನೆ ಇರತಕ್ಕಂಥದ್ದು ಬಿ.ಬಿ.ಎಂ.ಪಿ.ಗೆ ಸೀಮಿತವಾಗಿದೆ. ಅವರು ನೋಟಿಸ್ ಕೊಡಲಿ. ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಈಗ ನೀವು ಹೇಳಿಬಿಡಿ.

ಅಧ್ಯಕ್ಷರು: ಅವರು ನೋಟಿಸ್ ಕೊಟ್ಟರೆ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನೋಟಿಸ್‌ನ್ನು ಈಗಲೇ ಕೊಡಲೇಬೇಕೆಂದೇನಿಲ್ಲ.

ಅಧ್ಯಕ್ಷರು: ನೋಟಿಸ್ ಕೊಡದಿದ್ದರೆ, ಈಗ ಇರುವ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿಗೆ ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಈ

ಪ್ರಶ್ನೆ ಬಿ.ಬಿ.ಎಂ.ಪಿ.ಗೆ ಸೀಮಿತವಾಗಿರುವುದರಿಂದ ಈ ಪ್ರಶ್ನೆಯನ್ನು ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ಅವರು ಬೇಕಾದರೆ ನೋಟಿಸ್‌ನ್ನು ಕೊಡಲಿ. ಈಗಲೇ ಅವಕಾಶವನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನೋಟಿಸ್ ಬೇಕಾದರೆ ಕೊಡಿಸೋಣ. But you have got every power.

ಅಧ್ಯಕ್ಷರು: Yes. ಅದನ್ನು ಉಪಯೋಗಿಸಿಕೊಂಡೇ ಅವಕಾಶವನ್ನು ಕೊಡುತ್ತೇನೆ. ಅವರು ನೋಟಿಸ್‌ನ್ನು ಪ್ರತ್ಯೇಕವಾಗಿ ನನಗೆ ಕೊಡಲಿ.

ಶ್ರೀ ವಿ ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಇಡೀ ರಾಜ್ಯದಲ್ಲಿ ಇದೆ.

ಅಧ್ಯಕ್ಷರು: ಇಡೀ ರಾಜ್ಯದಲ್ಲಿ ಇರುವ ಸಮಸ್ಯೆಯಾಗಿರುವುದರಿಂದ ಅದರ ಬಗ್ಗೆ ಚರ್ಚೆ ಮಾಡಲು ಸೂಕ್ತ ರೀತಿಯಲ್ಲಿ ನೋಟಿಸ್ ಕೋಟ್ಟರೆ ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ಅವಕಾಶಕ್ಕಾಗಿ ಬೇರೆ ರೂಪದಲ್ಲಿ ತರಲಿ ಎಂದು ತಾವು ಹೇಳಿದಿರಿ.

ಅಧ್ಯಕ್ಷರು: ಹೌದು.

ಶ್ರೀ ಟಿ ಬಿ ಜಯಚಂದ್ರ: ಅರ್ಧ ಗಂಟೆಯಲ್ಲಿ ಚರ್ಚೆ ಮಾಡುವುದಕ್ಕೆ ಬೇರೆ form ಇಲ್ಲ. ಯಾವಾಗ ಒಂದು ಪ್ರಶ್ನೆಯನ್ನು ಕೇಳಿ ಮತ್ತೊಂದು ಪ್ರಶ್ನೆ ಉದ್ಭವಿಸಿದಾಗ ಮತ್ತು ಕೊಟ್ಟಂಥ ಉತ್ತರ ಸಮಾಧಾನಕರವಾಗಿಲ್ಲದಿದ್ದಾಗ.

ಅಧ್ಯಕ್ಷರು: ನೋಡಿ ಮಾನ್ಯ ಜಾರ್ಜ್‌ರವರು ಬಿ.ಬಿ.ಎಂ.ಪಿ.ಗೆ ಸೀಮಿತವಾಗಿ ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸಚಿವರು ಕೂಡ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಇಡೀ ರಾಜ್ಯದ್ದು ಕೇಳಿದರೆ ಹೇಗೆ.

ಶ್ರೀ ಟಿ ಬಿ ಜಯಚಂದ್ರ: ಆ ರೀತಿ ಅಲ್ಲ. I am quoting the Rule.

ಅಧ್ಯಕ್ಷರು: ರೂಲ್ಸ್ ಕೋಟಿಂಗ್ ಮಾಡುತ್ತೀರಿ. ರೂಲ್ಸ್ ಕೋಟಿಂಗ್ ಬಗ್ಗೆ ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ಪ್ರಶ್ನೆಯನ್ನು ಅರ್ಧ ಗಂಟೆ ಕಾಲಾವಧಿಗೆ ಕನ್ವರ್ಟ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಟಿ ಬಿ ಜಯಚಂದ್ರ: ಕೇಳಿದ ಪ್ರಶ್ನೆಗೆ ಸಮಾಧಾನಕರವಾದ ಉತ್ತರ ಬರದಿದ್ದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಆ ಪ್ರಶ್ನೆಯನ್ನು ಕನ್‌ವರ್ಟ್ ಮಾಡಬಹುದು.

ಅಧ್ಯಕ್ಷರು: ಬಹಳ ಸ್ಪಷ್ಟವಾಗಿ ನಮ್ಮ ನಿಯಮಾವಳಿಯಲ್ಲಿಯೇ ಈ ಬಗ್ಗೆ ಹೇಳಲಾಗಿದೆ. ಒಂದು ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದರೆ ಮೊದಲೇ ಅದರ ಬಗ್ಗೆ ನೋಟಿಸ್ ಕೊಟ್ಟಿರಬೇಕೆಂದು ರೂಲ್ಸ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಏಕೆ ಇದರ ಬಗ್ಗೆ ಸುಮ್ಮನೆ ಚರ್ಚೆ ಮಾಡುತ್ತೀರಿ.

ಶ್ರೀ ಟಿ ಬಿ ಜಯಚಂದ್ರ: ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನಾನು ಈಗಾಗಲೇ ಹೇಳಿರುವಂತೆ ಅವರು ನನಗೆ ನೋಟಿಸ್ ಕೊಡಲಿ. ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಟಿ ಬಿ ಜಯಚಂದ್ರ: ಯಾವ ಪ್ರಾವಿಶನ್‌ನಲ್ಲಿ ಚರ್ಚೆಗೆ ಅವಕಾಶ ಕೇಳಿ ತಮಗೆ ನೋಟಿಸ್ ಕೊಡಬೇಕು?

ಅಧ್ಯಕ್ಷರು: ನಿಮಗೆ ನಾವು ಹೇಳಿಕೊಡಬೇಕೆ ಜಯಚಂದ್ರರವರೆ? ಸಾರ್ವಜನಿಕ ಮಹತ್ವ ವಿಷಯವೆಂದು ಹೇಳಿ ರೂಲ್ 69 ರಡಿಯಲ್ಲಿ ಕೋಡಿ.

(ಗೊಂದಲ)

ಅಧ್ಯಕ್ಷರು: ನಾನು ಈ ಪ್ರಶ್ನೆಯನ್ನು ಈಗ ಮುಕ್ತಾಯ ಮಾಡಿದ್ದೇನೆ. ಮಾನ್ಯ ರೇವಣ್ಣನವರ ಪ್ರಶ್ನೆ ಇದೆ. ಮಾನ್ಯ ರೇವಣ್ಣನವರು ಈಗ ಪ್ರಶ್ನೆ ಕೇಳಬೇಕು.

ರಾಜ್ಯದಲ್ಲಿ 100 ಹಾಸಿಗೆಯುಳ್ಳ ಸರ್ಕಾರಿ ಆಸ್ಪತ್ರೆಗಳ ಬಗ್ಗೆ.